Reorganisation of Co-operative Department

424 SRI M. GANGANNA (Kustagi).—Will the Minister for Co-operation be pleased to state.—

(a) whether State Government had constituted a committee under the Chairmanship of Sri K. H. Patil to re-organise the whole Department to provide financial assistance and proper representation to the economically weaker sections ;

(b) if so, the persons delegated and the functions entrusted to this Committee ;

(c) the various places of the Committee's visits, views exchanged and suggestions obtained from the interested parties relating to this subject ;

(d) whether recommendation has been made by the Committee's Report submitted, for deletion of section 128 (a) and rule 17 (a) of the Karnataka Co-operative Societies Act and Rules, 1959, respectively ;

(e) if so, the reasons therefor ;

(f) whether it is; fact that the Government have decided to implement the necessary new Act and Rules only after placing the copy of the Report submitted by the Committee before the House and duly discussed ?

SRI H. C. SRIKANTAIAH (Minister for Co-operation).—

(a) No. But a committee was constituted for re-examination of the Karnataka Co operative Societies Act, 1959, under the Chairmanship of Sri K. H. Patil.

(b) The functions of the Committee is to re-examine and to suggest to Government, the necessary amendments to the Karnataka Co-operative Societies Act, 1959.

(c) After visiting the *following 12 district centres of the Karnataka State and neigbouring States of Kerala and Tamilnadu, suggestions were obtained after exchange of views with the Co-operative experts and office bearers of Co-operative Societies.

* (1) Mysore (2) Tumkur (3) Shimoga (4) Bangalore (5) Kolar (6) Hassan (7) Dakshina Kannada (8) Bijapur (9) Hospet (10) Sirsi (11) Belgaum and (12) Dharwad.

(d) No.

(e) This question does not arise.

(f) Further action will be taken after examining the Committee's Report by Government.

ಶ್ರೀ ಎಂ. ಗಂಗಣ್ಣ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ನನ್ನ ಮೊದಲ ಪ್ರಶ್ನೆಗೆ ''ಇಲ್ಲ'' ಎಂದೂ ಎರಡನೆಯ ಪ್ರಶ್ನೆಗೆ ''ಮರುಪರಿಶೀಲನೆ ಮತ್ತು ಅಗತ್ಯವಾದ ಮುಂದಿನ ತಿದ್ದುಪಡಿ ಮಾಡುವ ಬಗ್ಗೆ ಸರ್ಕಾರಕ್ಕೆ ಸಲಹೆ ಮಾಡುವುದು'' ಎಂದು ಉತ್ತರ ಕೊಟ್ಟಿದ್ದಾರೆ. ಇದಕ್ಕಾಗಿಯೇ ಒಂದು ಸಮಿತಿಯನ್ನು ರಚಿಸುವ ಅಗತ್ಯ ಇದೆಯೇ ? ಮತ್ತು ತಾವು (ಅಧ್ಯಕ್ಷರು) ಸಹಕಾರ ಸಚಿವ ರಾಗಿದ್ದಾಗ ಪ್ರಮುಖ ಸಹಕಾರ ಸಂಘಗಳನ್ನು ಪುನರ್ ರಚನೆ ಮಾಡುವುದರಿಂದ ಸಮಾಜದ ದುರ್ಬಲ ವರ್ಗದವರಿಗೆ ಪ್ರಾತಿನಿಧ್ಯ ಕೊಡುವುದಕ್ಕೆ ಸಾಧ್ಯವಾಗುತ್ತದೆಂದು ಮಾಡಿದ್ದೀರಿ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳಿಗೆ ಪ್ರಶ್ನೆ ಕೇಳಿ.

ಶ್ರೀ ಎಂ. ಗಂಗಣ್ಣ.—ಜಿಲ್ಲಾ ಹಾಗೂ ರಾಜ್ಯ ಮಟ್ಟದ ಸಹಕಾರ ಸಂಸ್ಥೆಗಳಲ್ಲಿ ದುರ್ಬಲ ವರ್ಗದವರಿಗೆ ಪ್ರಾತಿನಿಧ್ಯ ಕೊಡುವ ಬಗ್ಗೆ ಈ ಸಮಿತಿ ಶಿಫಾರಸ್ಸು ಮಾಡಿದೆಯೇ ಎಂಬುದನ್ನು ತಿಳಿಸಬೇಕು.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಅಧ್ಯಕ್ಷರೆ, ಈ ಒಂದು ಸಮಿತಿಯನ್ನು ರಚನೆ ಮಾಡಬೇಕೆಂದು ಸರ್ಕಾರ ತೀರ್ಮಾನ ಮಾಡಿದುದರಿಂದ ಈ ಸಮಿತಿಯನ್ನು ರಚನೆ ಮಾಡಿದ್ದು, ಆ ಸಮಿತಿಯ ಶಿಫಾರಸ್ಸು ಗಳು ಸರ್ಕಾರದ ಮುಂದೆ ಇವೆ. ಸರ್ಕಾರ ಆಪುಗಳನ್ನು ಪರಿಶೀಲನೆ ಮಾಡುತ್ತಿದೆ.

ಶ್ರೀ ಪಿ. ರಾಮದೇವ್.—ಅಧ್ಯಕ್ಷರೆ, ಸರ್ಕಾರ ತನ್ನ ಉತ್ತರದಲ್ಲಿ ''ಸಮಿತಿಯ ವರದಿಯನ್ನು ಸರಕಾರ ಪರಿಶೀಲಿಸಿದ ಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುವುದು'' ಎಂದು ಹೇಳಿದೆ. ಈ ಸಮಿತಿಯ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ಸುಮಾರು ಆರು ತಿಂಗಳುಗಳು ಆದುವು. ಈ ತಿಂಗಳಲ್ಲಿ ಈ ವರದಿ ಬಗ್ಗೆ ಸರ್ಕಾರದಿಂದ ಎರಡು ಬಾರಿ ಹೇಳಿಕೆಗಳು ಬಂದಿವೆ. ಈ ವರದಿಯನ್ನು ಮೈಸೂರಿನಲ್ಲಿ ಸೇರುವ ಸಚಿವ ಸಂಪುಟದ ಸಭೆಯಲ್ಲಿ ಇಟ್ಟು ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಒಂದು ಹೇಳಿಕೆ ಬಂತು. ನಂತರ ಇವುಗಳ ಚುನಾವಣೆಯನ್ನು ೨ ಬಾರಿ ಮುಂದೂಡಿ, ಮೂರನೆಯ ಬಾರಿ ಕೂಡಾ ಮುಂದೂಡಿದ್ದಾರೆ. ಇದು ಸರಿಯೇ ? ಈ ಸಮಿತಿಗೂ ಚುನಾವಣೆಗೂ ಏನು ಸಂಬಂಧ ? ಚುನಾವಣೆಯನ್ನು ಏಕೆ ಮಾಡಬಾರದು ? ಇದಕ್ಕೆ ಕೂಡಲೇ ಸಮಜಾಯಿಶಿ ಕೊಡುತ್ತೀರಾ ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಅಧ್ಯಕ್ಷರೆ, ಈ ಚುನಾವಣೆಗಳನ್ನು ಪ್ರತಿವರ್ಷವೂ ಮಾಡಬೇಕೇ ಅಥವಾ ಕ್ಲುಪ್ತವಾದ ಕಾಲದಲ್ಲಿ ಎಂದರೆ ೩ ವರ್ಷಕ್ಕೆ ಅಥವಾ ೪ ವರ್ಷಕ್ಕೆ ಒಂದು ಬಾರಿ ಮಾಡಬೇಕೇ ಎನ್ನುತಕ್ಕದ್ದರ ಬಗ್ಗೆ ಯಾವ ಶಿಫಾರಸ್ಸನ್ನು ಸಮಿತಿ ಮಾಡುತ್ತದೆ ಅದನ್ನು ಸರ್ಕಾರ ಒಪ್ಪಿದರೆ ಆಲ್ಲಿ ಪುನಃ ಚುನಾವಣೆಗಳನ್ನು ನಡೆಸಬೇಕಾಗುತ್ತದೆ. ಇದರಿಂದ ಸಹಕಾರ ಸಂಘಗಳಿಗೆ ಪುನಃ ಅನಾವಶ್ಯಕ ಖರ್ಚು ತಗಲುತ್ತದೆಂದು ಚುನಾವಣೆಗಳನ್ನು ಮುಂದಕ್ಕೆ ಹಾಕಲಾಗಿದೆ. ಇದರಲ್ಲಿ ಬೇರೆ ಯಾವ ಉದ್ದೇಶವೂ ಇಲ್ಲ. ಈ ಬಗ್ಗೆ ತೀರ್ಮಾನ ತೆಗೆದುಕೊಂಡ ಮೇಲೆ ಚುನಾವಣೆಗಳನ್ನು ನಡೆಸಬೇಕೆಂದು ತೀರ್ಮಾನ ತೆಗೆದುಕೊಳ್ಳಲಾಗಿದೆ.

ಶ್ರೀ ಪಿ. ರಾಮದೇವ್.—ಸ್ವಾಮಿ, ಅವರು ಎರಡು ಸಾರಿ ನೋಟೀಸ್‌ಗಳನ್ನೆಲ್ಲಾ ಹಂಚಿ ಆಗಲೇ ಹಣವನ್ನು ಖರ್ಚು ಮಾಡಿದ್ದಾರೆ. ಎರಡನೆಯದಾಗಿ ಚುನಾವಣೆ ಹಾಗೂ ಮಹಾಸಭೆ ಬೇರೆ ಬೇರೆ ಇರುತ್ತವೆ. ಪ್ರತಿ ಮಹಾಸಭೆಯಲ್ಲಿಯೂ ಚುನಾವಣೆಗಳು ಆಗಲೇಬೇಕೆಂದೇನೂ ಇಲ್ಲ. ಇಂತಹ ಮಹಾ ಸಭೆಗಳನ್ನು ತಾವು ನಡೆಸಿದ್ದೀರಿ. ತಮಗೆ ಗೊತ್ತಿದೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಹಾಸಭೆಗಳಲ್ಲಿ ಚುನಾವಣೆಗಳಾಗಬಾರದೆಂದೇ ಚುನಾವಣೆ ಗಳನ್ನು ಮುಂದಕ್ಕೆ ಹಾಕಿರತಕ್ಕದ್ದು. ಈಗ ಆಲ್ಲಿ ಚುನಾವಣೆಗಳನ್ನು ಮಾಡಿದರೂ ಸಹ ಈ ಸಮಿತಿಯ ಶಿಫಾರಸ್ಸನ್ನು ಸರ್ಕಾರ ಒಪ್ಪಿಕೊಂಡ ಪಕ್ಷದಲ್ಲಿ ಪುನಃ ಆಲ್ಲಿ ಚುನಾವಣೆಗಳನ್ನು ನಡೆಸಬೇಕಾಗುತ್ತದೆ. ಆದ್ದರಿಂದಲೇ ಅನಾವಶ್ಯಕವಾಗಿ ಹಣ ಖರ್ಚು ಆಗಬಾರದು ಎಂದು ಹೇಳಿ ಚುನಾವಣೆಗಳನ್ನು ಮುಂದಕ್ಕೆ ಹಾಕಿರುವುದು. ಈಗ ಸೆಪ್ಟೆಂಬರ್ ತಿಂಗಳಿಗೆ ೨ ವರ್ಷದ ಚುನಾವಣೆಯನ್ನು ಒಟ್ಟಿಗೆ ಮಾಡಬೇಕೆಂದು ಹೇಳಿ ಸರ್ಕಾರ ಈಗಾಗಲೇ ಆದೇಶ ಕೊಟ್ಟಿದೆ. ಅಷ್ಟರ ಒಳಗೆ ಸರ್ಕಾರ ಈ ಒಂದು ತಿದ್ದುಪಡಿಯಲ್ಲಿ ಯಾವ ಯಾವುದನ್ನು ಇವತ್ತು ಜಾರಿಗೆ ಕೊಡಬೇಕೆಂದು ಪರಿಶೀಲನೆ ಮಾಡಿ ತೀರ್ಮಾನ ತೆಗೆದು ಕೊಳ್ಳುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ಒಂದು ಸಮಿತಿಯ ವರದಿ ಸರ್ಕಾರಕ್ಕೆ ಬಂದಕೂಡಲೇ ನಿರ್ಣಯವನ್ನು ತೆಗೆದುಕೊಳ್ಳುವ ಒಂದು ಹೇಳಿಕೆಯನ್ನು ಸರ್ಕಾರ ಕೊಟ್ಟಿತು, ಇಲ್ಲಿಯವರೆಗೆ ಸರ್ಕಾರ

ನಿರ್ಣಯ ತೆಗೆದುಕೊಳ್ಳದೇ ಇರುವುದಕ್ಕೆ ಕಾರಣ ಏನು ? ಈ ಬಗ್ಗೆ ಈ ಅಧಿವೇಶನದಲ್ಲಿ ತಿದ್ದುಪಡಿಗಾಗಿ ಸದನದಲ್ಲಿ ಚರ್ಚೆಯಾಗಬೇಕಾಗುತ್ತದೆ. ಇದಕ್ಕೆ ೬ ತಿಂಗಳು ಅಥವಾ ೧ ವರ್ಷ ಆಗುತ್ತದೋ ಗೊತ್ತಿಲ್ಲ. ಈ ವಿಷಯ ಈ ಸಭೆಯಲ್ಲಿ ಚರ್ಚೆಯಾಗಿ ತಿದ್ದುಪಡಿಯಾಗುವವರೆಗೂ ಚುನಾವಣೆಗಳನ್ನು ಮುಂದಕ್ಕೆ ಹಾಕುವುದು ನ್ಯಾಯವೇ ? ಕೋ-ಆಪರೇಟಿವ್ ಆಕ್ಟ್ ಪ್ರಕಾರ ೬ ತಿಂಗಳಿಗಿಂತ ಹೆಚ್ಚಿಗೆ ಮುಂದುವರಿಸುವುದಕ್ಕೆ ನಿಮಗೆ ಅಧಿಕಾರ ಇಲ್ಲ. ಕಾನೂನನ್ನು ಮೀರಿ ತಾವು ಮುಂದೆ ಹೋಗಿದ್ದೀರಿ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—''ಅಟ್ ಎ ಟೈಮ್'' ಎಂದು ಇದೆ ಅದನ್ನು ತಾವು ಪ್ರಶ್ನೆ ಮಾಡಬಹುದಾಗಿತ್ತು. ಸರ್ಕಾರ ತಪ್ಪು ಆಜ್ಞೆ ಹೊರಡಿಸಿದ್ದರೆ, ರಾಮದೇವ್‌ರವರು ಚಾಲೆಂಜ್ ಮಾಡಬಹುದಾಗಿತ್ತು.

ಶ್ರೀ ಎಸ್.ಆರ್. ಬೊಮ್ಮಾಯಿ.—ವರದಿಯ ಬಗ್ಗೆ ಅಂತಿಮ ನಿರ್ಣಯ ಯಾವಾಗ ತೆಗೆದು ಕೊಳ್ಳುತ್ತೀರಿ ? ಚುನಾವಣೆ ಯಾವಾಗ ಮಾಡುತ್ತೀರಿ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಆದಷ್ಟು ಶೀಘ್ರವಾಗಿ ತೀರ್ಮಾನ ತೆಗೆದುಕೊಳ್ಳುತ್ತೇವೆ. ಇನ್ನು ಚುನಾವಣೆಗಳನ್ನು ಮುಂದಕ್ಕೆ ಹಾಕತಕ್ಕಂಥ ಪ್ರಯತ್ನವನ್ನು ಸರ್ಕಾರ ಮಾಡುವುದಿಲ್ಲ.

ಶ್ರೀ ಕೆ. ರಾಂಭಟ್.—ಸೆಪ್ಟೆಂಬರ್ ಒಳಗೆ ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎಚ್ ಸಿ. ಶ್ರೀಕಂಠಯ್ಯ.—ರಾಮದೇವ್ ಮತ್ತು ಭಟ್‌ರವರಿಗೆ ಚುನಾವಣೆ ಮುಂದಕ್ಕೆ ಹೋದದ್ದು ತುಂಬ ಅನುಕೂಲವಾಗಿದೆ.

ಶ್ರೀ ಪಿ. ರಾಂದೇವ್,—ಸ್ವಾಮಿ, ನಾನು ಕೂಡ ಒಂದು ಬ್ಯಾಂಕಿನ ಸದಸ್ಯನಾಗಿದ್ದೇನೆ. ಒಂದು ವರ್ಷದಿಂದ ಡಿವಿಡೆಂಟ್ ನಿಂತುಹೋಗಿದೆ. ಡಿವಿಡೆಂಟ್ ಕೊಡುವ ಹಾಗೆ ಮಾಡಿ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಡಿವಿಡೆಂಟ್ ಯಾವಾಗ ಬೇಕಾದರೂ ತೆಗೆದುಕೊಳ್ಳಬಹುದು. ಒಟ್ಟಿಗೆ ತೆಗೆದುಕೊಳ್ಳಬಹುದು. ಯಾರು ಬೇಡ ಅಂತ ಹೇಳುತ್ತಾರೆ?

Rural Industrial Scheme in Hassan District.

435. SRI K. H. HANUME GOWDA (Hassan).—Will the Chief Minister be pleased to state.—

(a) the names of persons or forms or industries to whom loans have been sanctioned from District Industrial Centre, Hassan for the last three years under the Rural Industrial Scheme in Hassan district ;

(b) the names of persons or farms of industries to whom industrial loans have been sanctioned in each Taluk of the District, (details to be furnished) ;

(c) the industries that are functioning in each Taluk in Hassan District to whom loans have been sanctioned (particulars to be furnished) ;

(d) the amount of allotment earmarked under this programme to this District for the last three years, the amount unspent and the reasons thereof ?

SRI R. GUNDU RAO (Chief Minister).—

(a) There are 47 industrialists for whom loans have been sanctioned. Particulars are laid on the table of the House.